

# ಕೆಜಿಎಫ್ ಪ್ರಭೆಯ ಸಿನಿಮಾ

ಹಲವು ದಶಕಗಳ ಹಿಂದೆ ಚಿನ್ನದ ಗಣಿಗಾಗಿ ರಾಷ್ಟ್ರಮಟ್ಟದಲ್ಲಿ ಗಮನಸೆಳೆದಿದ್ದ ಕೆಜಿಎಫ್, ಈಗ ಮತ್ತೆ ಸುದ್ದಿಯಲ್ಲಿದೆ. ಈ ಸುದ್ದಿಯ ಕೇಂದ್ರಬಿಂದು ಪ್ರಶಾಂತ್ ನೀಲ್ ನಿರ್ದೇಶನದ 'ಕೆಜಿಎಫ್' ಸಿನಿಮಾ. ಡಿ. 21ಕ್ಕೆ ತೆರೆಕಾಣುತ್ತಿರುವ ಈ ಸಿನಿಮಾ, ಹಲವು ದಿಸೆಗಳಲ್ಲಿ ಕನ್ನಡ ಚಿತ್ರರಂಗದ ಗಡಿಯನ್ನು ವಿಸ್ತರಿಸಿದೆ. ಬಾಲಿವುಡ್ ಸೂಪರ್‌ಸ್ಟಾರ್ ಶಾರುಖ್ ಖಾನ್ ಅವರ 'ಝೀರೊ' ಸಿನಿಮಾಕ್ಕೆ ಪೈಪೋಟಿ ಕೊಡುವ ಮಟ್ಟಕ್ಕೆ ಬೆಳೆದು ನಿಂತಿರುವ 'ಕೆಜಿಎಫ್', ಕನ್ನಡದ ಜೊತೆಗೆ ತೆಲುಗು, ತಮಿಳು, ಮಲಯಾಳಂ ಮತ್ತು ಹಿಂದಿ ಭಾಷೆಗಳಲ್ಲಿಯೂ ಬಿಡುಗಡೆಯಾಗುತ್ತಿದೆ. ಹಿಂದಿಯಲ್ಲಿ ಪರ್ಹಾನ್ ಅಖ್ತರ್ ಈ ಚಿತ್ರದ ಬಿಡುಗಡೆಯ ಹೊಣೆ ಹೊತ್ತಿದ್ದಾರೆ. ತೆಲುಗಿನ ರಾಜಮೌಳಿ, ಪ್ರಭಾಸ್, ತಮಿಳಿನ ವಿಶಾಲ್ ಹೀಗೆ ಹಲವು ಭಾಷೆಗಳ ಸೂಪರ್‌ಸ್ಟಾರ್‌ಗಳು ಕೆಜಿಎಫ್‌ಗೆ ಶುಭ ಹಾರೈಸಿದ್ದಾರೆ.

ಬಜೆಟ್‌ನ ವಿಷಯದಲ್ಲಿಯೂ ಈ ಚಿತ್ರ ಚಂದನವನದ ಇದುವರೆಗಿನ ಸೀಮೆಯನ್ನು ಉಲ್ಲಂಘಿಸಿದೆ. ಸುಮಾರು ₹60 ಕೋಟಿ ಬಜೆಟ್‌ನಲ್ಲಿ ವಿಜಯ ಕಿರಗಂದೂರು ಅವರು ಹೊಂಬಾಳೆ ಫಿಲ್ಮ್ಸ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಉದ್ದ ಗಡ್ಡ ಮೀಸೆ ಬಿಟ್ಟುಕೊಂಡ ಯಶ್‌ರ ರಗಡ್ ಲುಕ್ ಟ್ರೆಂಡ್ ಸೃಷ್ಟಿಸಿದೆ. 'ಜೋಕೆ ನಾನು ಬಳ್ಳಿಯ ಮಿಂಚು' ಹಾಡನ್ನು ಮರುಬಳಕೆ ಮಾಡಿಕೊಳ್ಳಲಾಗಿದ್ದು, ದಕ್ಷಿಣ ಭಾರತದ ಜನಪ್ರಿಯ ನಟಿ ತಮನ್ನಾ ಭಾಟಿಯ ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಹಿಂದಿಯಲ್ಲಿ 'ಗಲಿ ಗಲಿ' ಹಾಡನ್ನು ಮರುಬಳಕೆ ಮಾಡಿಕೊಂಡಿದ್ದು ಮೌನಿರಾಯ್ ಯಶ್ ಜತೆ ಸೊಂಟ ಬಳುಕಿಸಿದ್ದಾರೆ. ಶ್ರೀನಿಧಿ ಶೆಟ್ಟಿ ಈ ಚಿತ್ರದ ನಾಯಕಿ. ಅನಂತ್‌ನಾಗ್, ಅಚ್ಯುತ್ ಕುಮಾರ್, ವಸಿಷ್ಠ ಸಿಂಹ, ಅಯ್ಯಪ್ಪ, ಜಾನ್ ಕೊಕೇನ್ ಹೀಗೆ ಘಟಾನುಘಟಿ ನಟರ ದಂಡೇ ಈ ಚಿತ್ರದಲ್ಲಿದೆ. ರವಿ ಬಸ್ರೂರು ಸಂಯೋಜನೆ ಮಾಡಿರುವ ಹಾಡುಗಳು ಈಗಾಗಲೇ ಹಿಟ್‌ಹಾಡುಗಳ ಲಿಸ್ಟ್‌ಗೆ ಸೇರಿವೆ. ಭುವನ್ ಗೌಡ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಈ ಸಿನಿಮಾಕ್ಕೂ ಕೋಲಾರ ಚಿನ್ನದ ಗಣಿಗೂ ಏನು ಸಂಬಂಧ ಅಂದಿರಾ? ಇದು ರಾಖಿ ಎಂಬ ಹುಡುಗನ ಜೀವನದ ಕಥೆಯಂತೆ. ಮುಂಬೈದ ಕೊಳೆಗೇರಿಗಳಲ್ಲಿ ಬೆಳೆದ ಹುಡುಗನೊಬ್ಬ ಅತ್ಯಂತ ಶ್ರೀಮಂತನಾಗುವ ಆಸೆ ಹೊತ್ತು ಬರುವುದು ಕೋಲಾರದ ಚಿನ್ನದ ಗಣಿಗೆ. ಎಪ್ಪತ್ತರ ದಶಕವನ್ನು ತೆರೆಯ ಮೇಲೆ ಮರುಸೃಷ್ಟಿಸಿ, ಅಂದು ಸಂಚಲನ ಸೃಷ್ಟಿಸಿದ್ದ ಗೋಲ್ಡ್ ಮಾಫಿಯಾ ಇಟ್ಟುಕೊಂಡು ಕಥೆ ಕಟ್ಟಲಾಗಿದೆ.

ಒಂದು ಕಾಲಕ್ಕೆ ವಿಜೃಂಭಿಸಿ ಈಗ ಪಾಳುಬಿದ್ದಿರುವ ಕೋಲಾರ ಚಿನ್ನದ ಗಣಿ ನೆಲದಲ್ಲಿಯೇ ರೂಪುಗೊಂಡ 'ಕೆಜಿಎಫ್' ಸಿನಿಮಾ, ಬಿಗ್ ಬಜೆಟ್ ಮತ್ತು ಸೃಷ್ಟಿಶೀಲತೆಯ ಕಾರಣಗಳಿಗೆ ಕನ್ನಡ ಚಿತ್ರರಂಗದ ನಾಳಿನ ಸುವರ್ಣವೈಭವದ ಮುನ್ಸೂಚನೆ ಎಂಬಂತೆ ಬಿಂಬಿತವಾಗುತ್ತಿದೆ.

ನಡೆಯುತ್ತಿದ್ದ ರೌಡಿ ಚಟುವಟಿಕೆಗಳಿಗೂ ಈ ಮಾಯೆಯೇ ಕಾರಣವಾಗಿತ್ತು. ಚಿನ್ನದ ಗಣಿಯ ಹೊಳಪು ಮಾಸಿದ ನಂತರ ರೌಡಿಗಳ ತೋಳ್ಬಲ ಕೂಡ ಕಡಿಮೆಯಾಗಿದೆ. ಕೆಜಿಎಫ್‌ನ ಕೆಲವು ಪುಡಿ ರೌಡಿಗಳು ಈಗ ಬೆಂಗಳೂರಿನಲ್ಲಿ ಸುಣ್ಣಬಣ್ಣ ಬಳಿಯುವ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ.

ಅಪ್ಪನ ನೌಕರಿ ನೆಚ್ಚಿಕೊಂಡು ಸೋಮಾರಿಗಳಾಗಿದ್ದ ಪಡ್ಡೆಗಳೂ ಈಗ ವಿಧಿಯಿಲ್ಲದೆ ದುಡಿಮೆಯ ಮಾರ್ಗ ಅರಸಿ ಬೆಂಗಳೂರಿಗೆ ದೌಡಾಯಿಸುತ್ತಿದ್ದಾರೆ. ಇಡೀ ನಗರವನ್ನು ಒಂದು 'ಚಿನ್ನದ ಮ್ಯೂಸಿಯಂ' ಆಗಿ ಪರಿವರ್ತಿಸಿದ್ದರೆ, ಪ್ರವಾಸೋದ್ಯಮದ ಮೂಲಕ ಒಂದಿಷ್ಟು ದುಡ್ಡು ಅಲ್ಲಿಗೆ ಹರಿಯುತ್ತಿತ್ತು. ಅಲ್ಲಿನ ಜನ ಬೆಳ್ಳಂಬೆಳಿಗ್ಗೆ ಬೆಂಗಳೂರಿಗೆ ಬರುವುದು ಈಗಿನಷ್ಟು ಅನಿವಾರ್ಯ ಆಗುತ್ತಿರಲಿಲ್ಲವೇನೋ.

## ಆಧುನಿಕ ನಗರದ ಪಕ್ಕದಲ್ಲಿ

ಬೆಂಗಳೂರು ಅಂದರೆ ಬಂಡವಾಳ ಹೂಡಿ, ಹಣ ವೃದ್ಧಿಸಿ, ಲಾಭ ತೆಗೆಯುವುದಕ್ಕೆ ಇರುವ ರೂಪಕ ಎಂಬಂತೆಯೂ ಕಾಣಿಸಬಹುದು. ಬೆಂಗಳೂರಿನಿಂದ ಎರಡು ತಾಸು ಪ್ರಯಾಣಿಸಿದರೆ ಸಿಗುವ ಕೆಜಿಎಫ್‌ನ ರಸ್ತೆಗಳ ಪಕ್ಕದಲ್ಲಿ ಕಾಣಿಸುವುದು ಮಾರ್ಕ್ಸ್, ಲೆನಿನ್, ಚೆ ಗುವೆರಾ ಅವರ ಚಿತ್ರಗಳು. ಇದರೊಂದಿಗೆ


